**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 13654/2019 ಚಾಸಾಃ 1 ಪ್ರಾಸಾಃ 1**

**ಸಾಕ್ಷಿಯನ್ನು ದಿಃ 08.05.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಎಂ. ವಕೀಲರಿಂದಃ**

ನನಗೆ ಆರೋಪಿಯು ಚಾಸಾ-3 ರವರ ಮುಖಾಂತರ ಪರಿಚಯವಾಗಿರುತ್ತಾರೆ. ಚಾಸಾ-3 ರವರು ನಮ್ಮ ಗ್ರಾಮದವರು ಎಂದರೆ ಸರಿ. ನನ್ನ ಮತ್ತು ಚಾಸಾ-3 ರವರ ನಡುವೆ ಮೊದಲಿನಿಂದಲೂ ವಿಶ್ವಾಸ ಇರುತ್ತದೆ. 2016 ರಲ್ಲಿ ಆರೋಪಿಯು ನನಗೆ ಚಾಸಾ-3 ರವರ ಮುಖಾಂತರ ಪರಿಚಯವಾಗಿರುತ್ತಾರೆ. ಆರೋಪಿಗೆ ಪ್ರಿಂಟಿಂಗ್ ಪ್ರೆಸ್ ಅನುಭವ ಇರುವ ಬಗ್ಗೆ ಚಾಸಾ-3 ರವರು ನನಗೆ ತಿಳಿಸಿದರು. ಮಾರ್ಚ್-2017 ರಲ್ಲಿ ಆರೋಪಿಯ ಪರಿಚಯವಾಗಿರುತ್ತದೆ.

ಆರೋಪಿಯು ಲಗ್ಗೆರೆಯಲ್ಲಿ ಪ್ರಿಂಟಿಂಗ್ ಪ್ರೆಸ್ ಅನ್ನು ನಡೆಸುತ್ತಿದ್ದನ್ನು ನಾನು 2016-17 ರಲ್ಲಿ ನೋಡಿರುತ್ತೇನೆ. ಆರೋಪಿಯು ಚಾಸಾ-3 ರವರನ್ನು ಪಾಲುದಾರರನ್ನಾಗಿ ಮಾಡಿಕೊಳ್ಳಲು ಮಾತುಕತೆ ನಡೆಸಿದ್ದರು. ಆರೋಪಿಯ ವ್ಯವಹಾರದ ಖರ್ಚು ವೆಚ್ಚಗಳ ವಿವರ ನನಗೆ ಗೊತ್ತಿರುವುದಿಲ್ಲ. ನನ್ನ, ಚಾಸಾ-3 ಮತ್ತು ಆರೋಪಿಯ ನಡುವೆ ಪ್ರಿಂಟಿಂಗ್ ಪ್ರೆಸ್ ವ್ಯವಹಾರದ ಸಂಬಂಧ ಯಾವುದೇ ಕರಾರು ಪತ್ರ ಆಗಿರುವುದಿಲ್ಲ. ಆರೋಪಿಗೆ ಸೇರಿದ ಮಂಜುನಾಥ ಪ್ರಿಂಟಿಂಗ್ ಪ್ರೆಸ್ ಗೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ಆರೋಪಿ ಮತ್ತು ಚಾಸಾ-3 ರವರು ಒಟ್ಟಾಗಿ ಪ್ರಿಂಟಿಂಗ್ ಪ್ರೆಸ್ ವ್ಯವಹಾರಗಳನ್ನು ಮಾಡುತ್ತಿದ್ದರು. ಆರೋಪಿ ಮತ್ತು ಚಾಸಾ-3 ರವರು ಪಾಲುದಾರರಾಗಿ ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿದ್ದ ಬಗ್ಗೆ ದಾಖಲಾತಿಯನ್ನು ನಾನು

ನೋಡಿರುವುದಿಲ್ಲ. ನಿಪಿ-4 ರಂತೆ ನನ್ನ ಬ್ಯಾಂಕ್ ಖಾತೆಯಿಂದ ಚಾಸಾ-3 ಮತ್ತು ಆರೋಪಿ ಖಾತೆಗೆ ಹಣ ವರ್ಗಾವಣೆ ಆಗಿರುವ ಬಗ್ಗೆ ಕರಾರು ಪತ್ರವನ್ನು ಸಹ ಮಾಡಿಕೊಂಡಿರುತ್ತೇನೆ. ಸದರಿ ಕರಾರು ಪತ್ರವನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ನಮ್ಮ ನಡುವೆ ಒಟ್ಟು 03 ಕರಾರು ಪತ್ರಗಳು ಆಗಿರುತ್ತದೆ. ಸದರಿ ಕರಾರು ಪತ್ರಗಳಿಗೆ ಚೆಕ್ ನಂಬರ್ ಗಳನ್ನು ನಮೂದಿಸಲಾಗಿರುತ್ತದೆ.

ನಾನು ನಿವೃತ್ತ ಎ.ಎಸ್.ಐ ಆಗಿರುತ್ತೇನೆ. ನಾನು ಯಾವುದೇ ಕೆಲಸಗಳನ್ನು ಮಾಡುವುದಿಲ್ಲ. ನಿಪಿ-4 ರಲ್ಲಿ ನಮೂದಿಸಿರುವ ಹಣ ಆರೋಪಿಗೆ ಸಂದಾಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-3 ರವರು ಸೇರಿ ಚೆಕ್ ಅನ್ನು ನಗದೀಕರಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. 2017 ರವರೆಗೂ ಪ್ರಿಂಟಿಂಗ್ ಪ್ರೆಸ್ ವ್ಯವಹಾರ ಚೆನ್ನಾಗಿ ನಡೆದಿರುತ್ತದೆ. ನಾನು ಸಹ ವ್ಯವಹಾರದಲ್ಲಿ ಭಾಗಿದಾರನಾಗಿದ್ದೆನು.

ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**